# ಕೃಷಿಯಿಂದ ವಿಮುಖರಾದರೆ ಆಪತ್ತು ನಿಶ್ಚಿತ

## ಪೆರ್ಲ ನಾಲಂದ ಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ವಿಚಾರಸಂಕಿರಣ ಉದ್ಘಾಟಿಸಿ ಡಾ.ಚೌಡಪ್ಪ ಅಭಿಮತ

**ಪೆರ್ಲ:** ಭಾರತವು ಜನಸಂಖ್ಯೆಯಲ್ಲಿ ಕ್ಷಿಪ್ರ ಬೆಳವಣಿಗೆ ಹೊಂದುತ್ತಿರುವ ದೇಶ. ಇದರ ಜತೆಗೆ ಕೃಷಿ ಅಭಿವೃದ್ಧಿಯಾಗದಿದ್ದರೇ ಅಪಾಯ ಕಟ್ಟಿಟ್ಟ ಬುತ್ತಿಯೆಂದು ಕಾಸರಗೋಡು ಸಿಪಿಸಿಆರ್‌ಐ ನಿರ್ದೇಶಕರಾದ ಡಾ| ಪಿ.ಚೌಡಪ್ಪ ಹೇಳಿದ್ದಾರೆ.

ಅವರು ಪೆರ್ಲ ನಾಲಂದ ಕಾಲೇಜಿನಲ್ಲಿ ಶನಿವಾರ 'ತೋಟಗಾರಿಕಾ ಬೆಳೆಗಳು- ಪ್ರಸ್ತುತ ಪರಿಸ್ಥಿತಿ ಮತ್ತು ಭವಿಷ್ಯದ ಸಾಧ್ಯತೆಗಳು' ಎಂಬ ವಿಷಯದಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡುತ್ತಿದ್ದರು.

2030ರಲ್ಲಿ ಭಾರತದ ಜನಸಂಖ್ಯೆ 1.9 ಬಿಲಿಯನ್ ದಾಟಲಿದೆ. ಜನಸಂಖ್ಯೆ ಆಧರಿಸಿ ಆಹಾರ ಉತ್ಪಾದಿಸಲು ಸಾಧ್ಯವಿಲ್ಲ. ಭೂಮಿ ಲಭ್ಯತೆ, ನೀರಿನ ಕೊರತೆಯಿಂದ ಕೃಷಿ ಉತ್ಪಾದನೆ ಕುಂಠಿತಗೊಂಡು ಬಹಳಷ್ಟು ತೊಂದರೆ ಅನುಭವಿಸಬೇಕಾಗ ಬಹುದು, ಮತ್ತೊಂದು ಕಡೆ ಉತ್ಪಾದನಾ ವೆಚ್ಚ ಅಧಿಕವಾಗುತ್ತಿದೆಯೆಂದು ಕೃಷಿಕರು ಕೃಷಿಯಿಂದ ವಿಮುಖರಾಗಬಹುದು. ಈ ನಿಟ್ಟಿನಲ್ಲಿ ಕೃಷಿಯನ್ನು ಪ್ರೋತ್ಸಾಹಿಸುವುದು ಅನಿವಾರ್ಯವಾಗಿದೆ. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರವು ಕೃಷಿ ಅಭಿವೃದ್ಧಿಗೆ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ತುಂಡು ಭೂಮಿಯಲ್ಲೂ ಕೃಷಿ ಮಾಡಬೇಕು, ಯುವಕರು ಕೃಷಿಯತ್ತ ಆಕರ್ಷಿತರಾಗಬೇಕೆನ್ನುವುದು ಅವರ ಆಶಯ ಎಂದರು.




ಅಡಿಕೆಗೆ ಕಿಲೋಗೆ 250 ರೂ. ದೊರೆತರೆ ಉತ್ಪಾದನಾ ವೆಚ್ಚ ಸರಿದೂಗಿಸಬಹುದು. ತೆಂಗಿನ ಕಾಯಿಯಲ್ಲಿ ಕೃಷಿಕರು ನಷ್ಟ ಅನುಭವಿಸುತ್ತಾರೆ. ತೆಂಗಿನ ಉತ್ಪನ್ನ ತಯಾರಿಯತ್ತ ಗಮನ ಹರಿಸಬೇಕು. ತೆಂಗಿನ ಕಾಯಿಯ ಉತ್ಪನ್ನಗಳು ಎಂದೂ ರೋಗಕಾರಕವಲ್ಲ ರೋಗ ನಿವಾರಕಗಳಾಗಿವೆ ಎಂದು ಡಾ.ಚೌಡಪ್ಪ ಹೇಳಿದರು.

ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ| ಕಲ್ಲಡ್ಕ ಪ್ರಭಾಕರ ಭಟ್ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಾಲಂದ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಆನೆಮಜಲು ವಿಷ್ಣು ಭಟ್, ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ| ಕೆ.ಎಂ.ಕೃಷ್ಣ ಭಟ್ ಮಾತನಾಡಿದರು. ಪುತ್ತೂರು ವಿವೇಕಾನಂದ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹಪ್ರಾಚಾರ್ಯ ಡಾ| ವಿಘ್ನೇಶ್ವರ ವರ್ಮುಡಿ, ಪೆರ್ಲ ನಾಲಂದದ ಆಡಳಿತಾಧಿಕಾರಿ ಶಿವಕುಮಾರ ಕೆ, ಉಪನ್ಯಾಸಕರಾದ ಅಶೋಕ, ಶಂಕರ ಖಂಡಿಗೆ, ಗೀತಾ ವಿ. ಭಟ್ ಉಪಸ್ಥಿತರಿದ್ದರು.

ಪ್ರಾಂಶುಪಾಲ ಡಾ| ಕಮಲಾಕ್ಷ ಪ್ರಸ್ತಾವನೆಗೈದರು. ಉಪನ್ಯಾಸಕರಾದ ಶಾಂಭವಿ ಕಾರ್ಯಕ್ರಮ ನಿರೂಪಿಸಿ, ಅಶೋಕ ವಂದಿಸಿದರು.

ಬಳಿಕ ನಡೆದ ವಿಚಾರ ಗೋಷ್ಠಿಯಲ್ಲಿ 'ತೆಂಗಿನ ಮೌಲ್ಯವರ್ಧನೆಯ ಮೂಲಕ ಆದಾಯ ಹೆಚ್ಚಳ' ಬಗ್ಗೆ ಡಾ | ಪಿ.ಚೌಡಪ್ಪ, 'ಅಡಿಕೆ ಬೆಳೆಯ ಪ್ರಸ್ತುತ ಪರಿಸ್ಥಿತಿ ಮತ್ತು ಭವಿಷ್ಯದ ಸಾಧ್ಯತೆಗಳು' ಬಗ್ಗೆ ತುಮಕೂರು ವಿವಿಯ ಡಾ| ರವೀಂದ್ರಕುಮಾರ್, 'ಭವಿಷ್ಯದಲ್ಲಿ ರಬ್ಬರ್ ಬೆಳೆಯ ಸಾಧ್ಯತೆಗಳು' ಎಂಬ ವಿಷಯದ ಬಗ್ಗೆ ರಬ್ಬರ್ ಕ್ಷೇತ್ರಾಧಿಕಾರಿ ಶೋಬಿ ಜೋಸೆಫ್ ಮಾಹಿತಿ ನೀಡಿದರು.

### ತೆಂಗು ಬೆಳೆಯಲ್ಲಿ ನಷ್ಟ

**ಒಂದು ತೆಂಗಿನ ಕಾಯಿ ಉತ್ಪಾದಿಸಲು 8 ರಿಂದ 9 ರೂ. ವೆಚ್ಚವಾದರೆ ಮಾರ್ಕೆಟಿನಲ್ಲಿ ಸಿಗುವ ಬೆಲೆ ಕೇವಲ 3 ರೂ. ಇದರಿಂದ ಪ್ರತಿ ತೆಂಗಿನ ಕಾಯಿಯಲ್ಲಿ ಕೃಷಿಕರು 3 ರಿಂದ 4 ರೂ. ನಷ್ಟ ಅನುಭವಿಸುತ್ತಿದ್ದಾರೆ. ಸರಕಾರ, ಕೃಷಿಕರ ಸಂಘಗಳು ನೀರಾ ಉತ್ಪಾದನೆ, ತೆಂಗಿನಕಾಯಿಂದ ಸಕ್ಕರೆ ಇತ್ಯಾದಿ ತಯಾರಿಸಿದರೆ ಬೇಡಿಕೆ ಹೆಚ್ಚಾಗಬಹುದು.**

■ ಡಾ.ಪಿ.ಚೌಡಪ್ಪ

### ಭೂಮಿ ಮೇಲೆ ಮಮತೆ

**ಕೃಷಿಯಿಂದ ಸಿಗುವಷ್ಟು ನೆಮ್ಮದಿ ಬೇರೆ ಯಾವುದರಿಂದಲೂ ಸಿಗಲು ಸಾಧ್ಯವಿಲ್ಲ. ಯಾವಾಗ ರೈತ ತನ್ನ ಭೂಮಿಯನ್ನು ತಾಯಿಯ ಮಮತೆಯಿಂದ ನೋಡುತ್ತಾನೋ ಆಗ ಭೂಮಿ ಕೂಡ ಅದಕ್ಕೆ ಸರಿಯಾಗಿ ಪ್ರತಿಫಲ ನೀಡುತ್ತದೆ**

■ ಡಾ. ಕಲ್ಲಡ್ಕ ಪ್ರಭಾಕರ ಭಟ್